ವ್ಯಾಖ್ಯಾನ

ಅನುಭವದಡಿಗೆಯ ಮಾಡಿ

Ref.: Purandara Chintanaa Lahari by Dr.A.B. Shyamachar, published by Sri Srinivasa Utsava Balaga ®, Bengaluru – 560019, page No. 37.

ಕೀರ್ತನೆಯ ಚಿಂತನೆ:

ಶ್ರೀ ಪುರಂದರದಾಸರಿಂದ ರಚಿತ ಕೃತಿಗಳಿಗೆ 'ಪುರಂದರೋಪನಿಷತ್' ಎಂದು ತಮ್ಮ ಗುರುಗಳಾದ ಶ್ರೀ ವ್ಯಾಸರಾಜರು ಕರೆದು ಗೌರವಿಸಿದರು. ಇದಕ್ಕೆ ಕಾರಣ ಇವರ ಕೃತಿಗಳು ತತ್ತ್ವ ನಿರೂಪಣೆಯಲ್ಲಿ ಉಪನಿಷತ್‌ಗಳಿಗೆ ಸದೃಶವೆಂದು. ಶ್ರೀ ನಾರಾಯಣ ಪಂಡಿತರು ತಮ್ಮ ಸುಮಧ್ವವಿಜಯದಲ್ಲಿ ಶ್ರೀಮದಾಚಾರ್ಯರ ಗ್ರಂಥಗಳ ಬಗ್ಗೆ ಹೇಳುವಾಗ **'ಬಾಲಸಂಗಮಪಿ ಬೋಧಯದ್ಭೃಶಂ ದುರ್ನಿರೂಪವಚನಂ ಚ ಪಂಡಿತೈಃ'** ಎಂದು ಹೇಳಿದಂತೆ, ದಾಸರ ಕೃತಿಗಳೂ ಹಾಗೆಂದು ತಿಳಿಯಬೇಕು. ಮೇಲ್ನೋಟಕ್ಕೆ ಸುಲಭವೆಂದೆನಿಸಿದರೆ ಅದರ ಅರ್ಥಗಾಂಭೀರ್ಯ ಅಗಾಧವಾಗಿರುತ್ತದೆ. ಇದಕ್ಕೊಂದು ಉತ್ತಮ ಉದಾಹರಣೆಯೆಂದರೇ ಈ ಮೇಲಿನ ಕೃತಿ. ಇದು ಆಧ್ಯಾತ್ಮಮಯವಾಗಿ ಅರ್ಥೈಸಿದಷ್ಟು ವಿಷಯಗಳನ್ನೊಳಗೊಂಡಿದೆ. ಶ್ರೀ ದಾಸರು ಕಂಡದ್ದನ್ನೆಲ್ಲಾ ಆಧ್ಯಾತ್ಮ ಪರವನ್ನಾಗಿಸಿ, ಎಲ್ಲೆಲ್ಲೂ ಭಗವಂತನ ವಿಶ್ವರೂಪವನ್ನು ಕಂಡ ಮಹನೀಯರು. **'ಕಂಡಕಂಡಲೆಲ್ಲ ವಿಶ್ವರೂಪ ಕಾಂಬೋರು'** ಎಂಬುದಕ್ಕೆ ನಿದರ್ಶನ ಶ್ರೀ ಪುರಂದರದಾಸರು. ಈ ಪದ್ಯದಲ್ಲಿ ದಾಸರು ಶ್ರೀ ಕೃಷ್ಣನ ಭಗವದ್ಗೀತೆಯ, ಸಕಲ ಶಾಸ್ತ್ರಗಳ ಸಾರವನ್ನೇ ಅಡಗಿಸಿಟ್ಟಿರುವರು.

ಈ ಕೃತಿಯಲ್ಲಿ ಅಡಗಿಸಿರುವ ಕಲ್ಪನೆ, ಚಿಂತನೆ, ವಿಚಾರಧಾರೆ ಅದ್ಭುತ.

ಅನುಭವದಡಿಗೆಯ ಮಾಡಿ ಅದ
ಕ್ಕನುಭವಿಗಳು ಬಂದು ನೀವೆಲ್ಲ ಕೂಡಿ ॥ ಪ ॥

ಹುಟ್ಟಿ ಬಂದ ಜೀವಿ ತನ್ನ ಗುರಿಯನ್ನು ತಲುಪಲು ಮಾಡಬೇಕಾದ ಸಾಧನೆಯ ರಹಸ್ಯವನ್ನು ರಹಸ್ಯವಾಗಿ ತುಂಬಿಟ್ಟಿರುವರು. ಇಲ್ಲಿ ದಾಸರು ಮಾಡಿರುವ ವಿಶ್ಲೇಷಣೆ ಅಸಾಮಾನ್ಯವಾದದ್ದು. ಸ್ಥೂಲ

ವಾಗಿ ನೋಡಲು ಪ್ರಯತ್ನ ಮಾಡುವುದಾದರೆ ಹೀಗಿದೆ. 'ಅನುಭವದಡಿಗೆಯ ಮಾಡಿ' ಅನೇಕ ಹಂತಗಳ ಸಾಧನೆಗಳ ಮೂಲಕ, ಕಾಯಕ – ಮಾನಸಿಕವಾಗಿ ಸಿದ್ಧಿ ಪಡೆದಾಗ ಕಡೆಗೆ ಬಿಂಬಾಪರೋಕ್ಷದ ಅನುಭವ ಉಂಟಾಗುತ್ತದೆ. ಹೀಗೆ ವ್ಯಾಪ್ತನಾದ ಶ್ರೀಹರಿಯ ಮಾನಸ ಪೂಜೆಯಿಂದ ಸಿದ್ಧವಾದದ್ದು ಬಿಂಬಾಪರೋಕ್ಷ.' ಇದೇ ಪಕ್ವವಾದ ಅಡಿಗೆ. ಇದನ್ನು ತಾನು ಮಾತ್ರ ಅನುಭವಿಸದೆ ಇತರ ಸಜ್ಜನರೊಂದಿಗೆ ಹಂಚಿಕೊಳ್ಳಬೇಕು. ಈ ಸಮಾನಸ್ಕಂದರ ಸಂಗಮದಿಂದ ಇನ್ನು ಪರಿಪಕ್ವವಾಗುತ್ತದೆ. ಅದಕ್ಕೆ ದಾಸರು 'ಅನುಭವಿಗಳು ಬಂದು ನೀವೆಲ್ಲ ಕೂಡಿ' ಎಂದರು. ಇದಕ್ಕೆ ಇವರ ಗುರುಗಳಾದ ಶ್ರೀವ್ಯಾಸರಾಜರು 'ಸಂಗವಾಗಲಿ–ಸಾಧು ಸಂಗವಾಗಲಿ ಸಂಗದಿಂದ ಲಿಂಗ ದೇಹ ಭಂಗವಾಗಲಿ' ಎಂದದ್ದು ಎಂಬುದನ್ನು ಗಮನಿಸಬೇಕು. ಈ ಪಲ್ಲವಿಯಲ್ಲಿಯ ವಿಶೇಷವೆಂದರೆ, ಇಲ್ಲಿ ಮೊದಲ ಸಾಲು ನಂತರ ಎರಡನೇ ಸಾಲು ಮತ್ತೆ ಮೊದಲದ್ದು ಹೀಗೆ ಪುನಾರಾವರ್ತನೆ ಮಾಡಿದಲ್ಲಿ ಅನುಭವದ, ಅನುಭವಗಳ ಮಿಲನವು ಚಕ್ರದೋಪಾದಿಯಾಗಿ ಫಲವೂ ಅನಂತಪಟ್ಟಾಗುವುದೆಂದು ದಾಸರು ಸೂಚಿಸಿರುವರು.

ಒಳ್ಳೆ ಅಡುಗೆ (ಪಾಕ) ಸಿದ್ಧವಾಗುವುದು ಪಾಚಕನಾದವನು ಮತ್ತೆ ಮತ್ತೆ ಮಾಡಿ ಅನುಭವ ಪಡೆಯುತ್ತಾ ಹೋದಾಗ, ಜೊತೆಗೆ ಇತರರು ಮಾಡಿದ ಉತ್ತಮ ಸಾತ್ವಿಕ ಆಹಾರಗಳನ್ನು ತಿಂದು ಅನುಭವ ಪಡೆದಾಗ. ಹೀಗೆಯೇ ಸಾಧನೆ (ಬಿಂಬಾಪರೋಕ್ಷವೂ) ತಾನು ಪಡೆದು ತನ್ನ ಗುರುಹಿರಿಯರ–ಅನುಭವಿಗಳ ಕೂಡಿ ಚಿಂತಿಸಿದಾಗ ಇಮ್ಮಡಿಸುವುದನ್ನು ಕಂಡ ದಾಸರು ಅನುಭವಿಸಿ ಆಡಿದ ಮಾತುಗಳು ಇದಾಗಿದೆ.

ಈ ಭಗವಂತನ ಸಾಕ್ಷಾತ್ಕಾರಕ್ಕೆ ಬೇಕಾದ ಸಿದ್ಧತೆಗಳೇನೆಂಬುದನ್ನು ಅನೇಕ ಉಪಮಾನಗಳಿಂದ ವಿವರಿಸಿರುವ ದಾಸರ ಚಿಂತನಾಲಹರಿ ಊಹಾತೀತವೆನ್ನಬಹುದು. ಈ ಕೃತಿಯಲ್ಲಿ ದೃಷ್ಟವಾದ ಕಣ್ಣಿಗೆ ಕಾಣಿಸುವ ವಸ್ತುಗಳಿಂದ ಅದೃಷ್ಟವಾದ ಕಾಣದ ವಸ್ತುವಿನ ಪರಿಕಲ್ಪನೆಯನ್ನು ನಮ್ಮ ಮುಂದಿಡುವರು. ಶ್ರೀಮದಾಚಾರ್ಯರು ಮಹಾಭಾರತವನ್ನು **'ಏವಂ ಆಧ್ಯಾತ್ಮಾನಿಷ್ಟಂ ಹಿ ಪರಿಚಕ್ಷತೇ'** ಎಂದಂತೆ ದಾಸರಿಗೆ ಜಗತ್ತೇ ಆಧ್ಯಾತ್ಮಮಯವಾಗಿ ಕಂಡಿತು. ಇದಕ್ಕೆ ಇವರ ಅನೇಕ ಕೃತಿಗಳೇ ಸಾಕ್ಷಿ. **'ಕಂಡ ಕಂಡಲ್ಲೆಲ್ಲ ವಿಶ್ವರೂಪ ಕಾಂಬೋರೋ'** ಎಂದು ದಾಸರು ಹೇಳಿದಂತೆ ಎಲ್ಲೆಲ್ಲೂ ಶ್ರೀಹರಿಯನ್ನು ಕಂಡ ಧನ್ಯಾತ್ಮರು ಇವರು.

ಈ ಕೃತಿಯನ್ನು ನೋಡುವ ಮುನ್ನ ಮನಸ್ಸಿನಲ್ಲಿ ಎರಡು ವಿಷಯಗಳನ್ನು ತಿಳಿದಿರಬೇಕು. ಒಂದು ಅಡುಗೆಯ ಮನೆ. ಅಡುಗೆಗೆ ಬೇಕಾದ ಸಾಮಗ್ರಿಗಳು. ಪಾತ್ರೆ, ಪಾತ್ರೆಯಲ್ಲಿ ಹಾಕುವ ನೀರು, ಧಾನ್ಯಾದಿಗಳು. ಈ ಪಾತ್ರೆ ಇಡಲು ಒಲೆ, ಒಲೆಗೆ ಹಚ್ಚುವ ಬೆಂಕಿ ಅದಕ್ಕೆ ಬೇಕಾದ ಕಟ್ಟಿಗೆಗಳು. ಎರಡನೇಯದ್ದು ಈ ದೇಹ.

ಈ ದೇಹದಲ್ಲಿಯ ದೃಷ್ಟ–ಅದೃಷ್ಟ ವಸ್ತುಗಳು. ಅಂದರೆ ಈ ದೇಹ, ಇಂದ್ರಿಯಗಳು ಅಂತರ್ಗತ ಜ್ಞಾನ–ಭಕ್ತಿ–ವಿರಕ್ತ್ಯಾದಿಗಳು, ಸತ್ವ–ರಜ–ತಮೋಗುಣಗಳು, ಬಹುಮುಖ್ಯವಾಗಿ ಮನಸ್ಸು ಆ ಮನಸ್ಸಿಗೆ ಅಂಟಿಕೊಂಡಿರುವ ಕಲ್ಮಶ ಇತ್ಯಾದಿ ಇತ್ಯಾದಿಗಳು. ಈ ಉಪಮಾನ ಉಪಮೇಯಗಳ ಪರಾಮರ್ಶದಿಂದ ಒಬ್ಬ ಸಾಧಕನ ಅನುಭವದ ಮಥಿತ ಆಂತರ್ಯ ತಿಳಿಯುತ್ತದೆ. ಅಡಿಗೆ ಮನೆಯಲ್ಲಿ ಪಾಕ ಸಿದ್ಧವಾಗುವುದು ಎಂದರೆ ಒಬ್ಬ ಸಾಧಕ ಜೀವಿಯ ಮನಸ್ಸು ಪರಿಪಕ್ವವಾಗಿ ಹೃದಯ ಕಮಲದಲ್ಲಿ ನೆಲೆಸಿರುವ ಭಗವಂತನನ್ನು, ತನ್ನ ಮಾನಸ ಪೂಜೆಯಿಂದ ಬಿಂಬಾಪರೋಕ್ಷವನ್ನು ಪಡೆಯುವುದಾಗಿದೆ. ಇದೇ 'ಅನುಭವದ ಅಡಿಗೆಯ ಮಾಡಿ' ಎಂಬುದರ ಆಂತರ್ಯ. ದಾಸರು ಇದನ್ನೇ ಅನುಭವದ ಅಡಿಗೆ ಎಂದು ಕರೆದಿದ್ದಾರೆ.

ತನುವೆಂಬ ಭಾಂಡವ ತೊಳೆದು ಕೆಟ್ಟ
ಮನವ ಚಂಚಲವೆಂಬ ಮುಸುರೆಯ ಕಳೆದು
ಘನವಾಗಿ ಮನೆಯನ್ನು ಬಳಿದು ಅಲ್ಲಿ
ಮಿನುಗುವ ತ್ರಿಗುಣದ ಒಲೆಗುಂಡ ನಡೆದು ॥ **1** ॥

ಯಾರೇ ಅಡುಗೆ ಮಾಡುವವರು ಪಾತ್ರೆಯನ್ನು ಶುದ್ಧವಾಗಿಟ್ಟಿರಬೇಕು. ಇಲ್ಲಿ ಸಾಧಕನ ದೇಹವೇ ಭಾಂಡ (ಪಾತ್ರೆ). ಇದರ ಶುದ್ಧತೆ ಎಂದರೆ ದೇಹದ ಬಾಹ್ಯ ಹಾಗೂ ಅಂತಃಶುದ್ಧತೆ. ದೇಹದ ಶುದ್ಧತೆಯು ಅಂತಃಕರಣ ಶುದ್ಧಿಗೆ ಕಾರಣವಾಗಿದೆ. ಈ ದೇಹದಿಂದ ಯಾವದೇ ಸತ್ಕರ್ಮಾನುಷ್ಠಾನ ಮಾಡಲು ಸಂಕಲ್ಪ ಪೂರ್ವಕ ಸ್ನಾನಾದಿಗಳಿಂದ, ಊರ್ಧ್ವಪುಂಡ್ರಾದಿ ಧಾರಣದಿಂದ, ಶುದ್ಧ ವಸ್ತ್ರಾದಿ ಧಾರಣಗಳಿಂದ ಹೀಗೆ ಶುದ್ಧನಾಗಿರಬೇಕು. ಇದು ಅಧಿಕಾರವನ್ನು ತಂದು ಕೊಡುತ್ತದೆ. ಇದಕ್ಕೂ ಮುಖ್ಯವಾಗಿ 'ಕೆಟ್ಟ ಮನದ ಚಂಚಲವೆಂಬ ಮುಸುರೆಯ ತೊಳೆದು' ಎಂದರು. 'ಮನ ಯೇವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ' ಎಂದು ಶ್ರೀಕೃಷ್ಣ ಹೇಳಿದಂತೆ ಅಂತಃಕರಣವಾದ ಮನಸ್ಸು ಶುದ್ಧವಾಗಿರಬೇಕು. ಇದುವೇ ಮನಸ್ಸನ್ನು ತೊಳೆದಂತೆ. ಶ್ರೀಮದಾಚಾರ್ಯರು 'ಚಂಚಲಲೋಯಂ ಮನೋ ಮೀನೋ' ಎಂದಂತೆ ನೀರೊಳ ಮೀನಿನಂತೆ ಮನಸ್ಸು ಬಹು ಚಂಚಲವಾದದ್ದು. ಇದರ ನಿಯಂತ್ರಣ ಬಲು ಕಠಿಣ. ಇದಕ್ಕೆ ಅಂಟಿಕೊಂಡಿರುವುದೇ ಮುಸುರೆ. ಮುಸುರೆ ಎಂದರೆ ಕಶ್ಮಲ (ಹೊಲಸು) ದುಷ್ಟ ಚಿಂತನೆಗಳು. ಈ ಕಶ್ಮಲ ತೊಳೆಯುವವರೆಗೂ ಉಪಯೋಗಿಸಲಾಗದು. ಅದರಂತೆ ದೇಹಕ್ಕೆ ಮನಸ್ಸಿಗೆ ಅಂಟಿದ ಮುಸರೆ ಹೋಗುವವರೆಗೂ ಅಂದರೆ ಅವನು ಶುದ್ಧನಾಗುವವರೆಗೂ ಸತ್ಕರ್ಮಾನುಷ್ಠಾನಕ್ಕೆ ಅಧಿಕಾರಿಯಾಗನು. ನಂತರ ನಾವಿರುವ ಆಲಯ(ಮನೆ)ವನ್ನೂ ಶುದ್ಧಪಡಿಸಬೇಕು. ಇಲ್ಲಿ ದಾಸರು ಉಪಯೋಗಿಸಿದ ಮನೆ ಶಬ್ದಕ್ಕೆ ಅನೇಕಾರ್ಥಗಳಿವೆ. **'ಗೃಹಣೀ ಗೃಹಮುಚ್ಯತೇ'** ಎಂದು ಮನು ಹೇಳಿದಂತೆ ಮನೆಯೆಂದರೆ ಗಂಡ–

ಹೆಂಡತಿ, ಮಕ್ಕಳು ಅನುಬಂಧಿಗಳು ಇರುವ ತಾಣ. ನಮ್ಮ ಜೊತೆಗಿರುವವರೂ ಶುದ್ಧರಾಗಿರಬೇಕು. ಎಲ್ಲರನ್ನೂ ಶುದ್ಧವಾಗಿ ಅಂದರೆ ಕಾಮ–ಕ್ರೋಧಾದಿ ದೋಷಗಳಿಂದ ವರ್ಜಿತರನ್ನಾಗಿಸಬೇಕು. ಇದಕ್ಕೆ ಮುನ್ನ ನಾವು ಶುದ್ಧವಾಗಿರಬೇಕಲ್ಲವೆ? ಇದಾದನಂತರ ಪಾಕ. ಗೃಹದಲ್ಲಿ ಮೂರು ಕಲ್ಲುಗಳುಳ್ಳ ಒಲೆಯನ್ನು ಸ್ಥಿರಪಡಿಸಬೇಕು. ಯಾವದೇ ಪಾಕ ಮಾಡಲು ಒಲೆ ಅತ್ಯಾವಶ್ಯಕ. ಇಲ್ಲಿ ಮೂರು ಕಲ್ಲುಗಳೆಂದರೆ ಸತ್ವ–ರಜ–ತಮಸ್ಸೆಂಬ ಮೂರು ಗುಣಗಳು. ಇದು ಪ್ರಕೃತಿಯೂ ಆಗಿದೆ. ಈ ಗುಣಗಳಿಲ್ಲದ ಜಗತ್ತಿಲ್ಲ, ಈ ಗುಣಗಳನ್ನು ಹೊಂದಿರದ ಜೀವಿಯಿಲ್ಲ. ಆದ್ದರಿಂದ ಯಾವದೇ ಕಾರ್ಯಕ್ಕೆ ಇಂತಹ ಒಲೆ ಅಂದರೆ ಗುಣಗಳು ಇರುತ್ತವೆ.

ವಿರಕ್ತಿಯೆಂಬುವ ಮಡಿಯುಟ್ಟು ಪೂರ್ಣ
ಹರಿಭಕ್ತಿಯೆಂಬ ನೀರನ್ನೆಸರಿಟ್ಟು
ಅರಿವೆಂಬ ಬೆಂಕಿಯ ಕೊಟ್ಟು ಮಾಯಾ
ಮರವೆಂಬ ಕಾಷ್ಠವ ಮುದದಿಂದ ಸುಟ್ಟು ॥ 2 ॥

ಪಾಕಕ್ಕೆ ಪ್ರಾರಂಭಿಸುವ ಮುನ್ನ ಭಗವಂತನಿಗೆ ಮಾಡಿದ ಪಾಕ ಅರ್ಪಿಸಲು ಮಡಿಯನ್ನು ಉಟ್ಟಿರಬೇಕು. ಇಲ್ಲಿ ದಾಸರು ಮಡಿಯನ್ನು ವಿರಕ್ತಿಯೆಂದು ಸಂಕೇತಿಸಿರುವರು. ಮಡಿ ಎಂದರೆ ನೈರ್ಮಲ್ಯ. ಒಳ ಅರ್ಥ ಅಂತಃಕರಣ ಶುದ್ಧಿ. ಮೇಲಿನ ಅರ್ಥ ಮೈಲಿಗೆಯಿಂದ ದೂರವಿರುವುದು. ಯಾವದೇ ರೀತಿಯ ಮೈಲಿಗೆ(ಅಶುದ್ಧತೆ–ಅನಾಚಾರ)ಯಿಂದ ದೂರವಿದ್ದು, ಮಾನಸಿಕವಾಗಿಯೂ ಅದರ ಸಂಪರ್ಕವಿಲ್ಲದಿರುವುದಾಗಿದೆ. ದಾಸರು ವಿರಕ್ತಿಗೆ ಮಡಿಯನ್ನು ಹೋಲಿಸಿರುವುದು ಔಚಿತ್ಯಪೂರ್ಣವಾಗಿದೆ. ವೈರಾಗ್ಯವೆಂದರೆ ಸರ್ವಸಂಗ ಪರಿತ್ಯಾಗ. ಯದೃಚ್ಛಾಲಾಭ ಸಂತುಷ್ಟನಾಗಿ, ಸ್ವೋಚಿತ ಕರ್ಮಗಳನ್ನಾಚರಿಸುತ್ತಾ, ಅರಿಷಡ್ವರ್ಗಗಳೆಂಬ ಕಾಮಾದಿಗಳನ್ನ ಜಯಿಸಿರುವವನಾಗಿ ವಿಶೇಷವಾಗಿ ಭಗವನ್ನಿಷ್ಠ ಬುದ್ಧಿಯುಳ್ಳವನಾಗಿರಬೇಕು. ಇವನು ವಿರಾಗಿ. ಈ ವಿರಾಗದ ಭಾವವೇ ವೈರಾಗ್ಯ. ಇವನೇ ನಿಜಾರ್ಥದಲ್ಲಿ ಮಡಿವಂತ. ಇವರೆ ಹೇಳಿದಂತೆ ಮಡಿ ಎಂದು ಹಾರುವವನಲ್ಲ. ವಿರಕ್ತಿಯೆಂಬ ಮಡಿಯನ್ನು ಉಟ್ಟವನು ಭಗವಂತನಿಗೆ ಹತ್ತಿರನಾಗುವ. ಇದರಿಂದ ಮಾತ್ರ ಹರಿಭಕ್ತಿಯು ಹುಟ್ಟುವುದು ಸಾಧ್ಯ. ಈ ರೀತಿಯ ಮಡಿವಂತ ಭಾಂಡದಲ್ಲಿ ನೀರನ್ನು ತುಂಬಿ ಒಲೆಯ ಮೇಲಿಡಬೇಕು. ದಾಸರು ನೀರನ್ನು ಹರಿಭಕ್ತಿ ಎಂದಿರುವರು.

ನೀರಿನ ಧರ್ಮ ಪ್ರವಹಿಸುವುದು ಭಕ್ತಿಯೂ ಹಾಗೆ ನಿರಂತರವಾಗಿ ಶ್ರೀಹರಿಯಲ್ಲಿಯೇ ಪ್ರವಹರಿಸುವ ಸಾಧನವಾಗಬೇಕು. **'ನಿರಂತರ ಪ್ರೇಮ ಪ್ರವಾಹೋ ಭಕ್ತಿಃ'** ಎಂದ ಶ್ರೀಮದಾಚಾರ್ಯರ ಭಾವವನ್ನೇ ಇಲ್ಲಿಟ್ಟಿರುವರು. ಈ ಭಕ್ತಿ ಎಂಬುದು ಪರೀಕ್ಷೆಗೆ ಗುರಿಯಾಗಬೇಕು. ನೀರು ಕಾಯಿಸಲು ಅದು ಹಗುರಾಗುವುದು ಜೊತೆಗೆ ಆವಿಯಾಗುವುದು. ಅದರಂತೆ ಭಗವಂತನಲ್ಲಿ ಮಾಡುವ ಭಕ್ತಿಯು ನಮ್ಮ ತಾಪತ್ರಯಗಳನ್ನು ಕಳೆದು ಹಗರನ್ನಾಗಿಸುತ್ತದೆ. ಈ ನೀರು ಕಾಯಲು ಒಲೆಯಲ್ಲಿ ಬೆಂಕಿ ಇರಬೇಕು. ಈ ಬೆಂಕಿಯನ್ನು ದಾಸರು ಅರಿವು ಎಂದು ಸೂಚಿಸಿರುವರು, ಶ್ರೀಕೃಷ್ಣ ಗೀತೆಯಲ್ಲಿ **'ಜ್ಞಾನಾಗ್ನಿಃ ದಗ್ಧ ಕರ್ಮಾಣಿ ತಮಾಹುಃ ಪಂಡಿತಂ ಬುಧಃ'** ಎಂದು ಹೇಳಿರುವ. ಜ್ಞಾನವನ್ನು ಅಗ್ನಿ ಎಂದು ಕರೆದಿರುವುದು ದಾಸರ ಮಾತು ಸಮಾಖ್ಯೆ ಎಂತಿದೆ. ಅಂದರೆ ಸಮೀಚೀನ ಜ್ಞಾನವೆಂಬ ಅಗ್ನಿಯನ್ನು ಒಲೆಯಲ್ಲಿಡಬೇಕೆಂದಾಯಿತು. ಯಥಾರ್ಥ ಜ್ಞಾನದಿಂದ ಸಾಧಕ ಜೀವನು ಶುದ್ಧ ಭಕ್ತಿಯುಳ್ಳವನಾಗಿ ವೈರಾಗ್ಯಾದಿ ಗುಣಸಂಪನ್ನನಾಗಿ, ತನ್ನ ಶುದ್ಧಮನಸ್ಸು ದೇಹದಿಂದ ಭಗವನ್ಮುಖನಾಗಿ ಜೀವನ ಸಾಗಿಸಿದಲ್ಲಿ ಅನುಭವದಡಿಗೆಯ ಮಾಡಿ ಎಂಬ ಮಾನಸ ಪೂಜೆಗೆ ಸಿದ್ಧನಾಗುವ.

ದಾಸರು ಇಷ್ಟಾದರೆ ಸಾಲದೆಂದರು. ಒಲೆಯಲ್ಲಿ ಇರುವ ಬೆಂಕಿಗೆ ಉರಿಯಲು ಕಟ್ಟಿಗೆ ಬೇಕು. ಒಲೆಯಲ್ಲಿರುವ ಕಟ್ಟಿಗೆ (ಕಾಷ್ಠ) ಸುಟ್ಟಾಗ ಮಾತ್ರ ಭಾಂಡದಲ್ಲಿಯ ಪದಾರ್ಥ ಬೇಯುವುದು ಕಂಡಿದೆ. ಅಂದರೆ ಇಲ್ಲಿ ಸುಡುವ ಕಾರ್ಯ ನಡೆಯಬೇಕಿದೆ. ಅಧ್ಯಾತ್ಮಿಕವಾಗಿ ಏನನ್ನು ಸುಡಬೇಕೆಂಬುದನ್ನು ಸುಂದರವಾದ ಉಪಮೆಯಿಂದ ವಿವರಿಸುವರು. 'ಮಾಯಾಮರವೆಂಬ ಕಾಷ್ಠವ ಮುದದಿಂದ ಸುಟ್ಟು' ಎಂದರು. ತತ್ತ್ವವಾದಕ್ಕೆ ವಿರುದ್ಧವಾದ ಮಿಥ್ಯಾವಾದವೆಂಬ ಹೆಮ್ಮರ ಜೀವನ ಸರ್ವಸಾಧನೆಗಳನ್ನು ನಾಶಗೊಳಿಸಿ ತಮಸ್ಸಿಗೆ ಅಟ್ಟುವಂತಾಗಿಸುತ್ತದೆ. ಅದಕ್ಕೆ ಈ ಅನ್ಯಥಾಜ್ಞಾನವನ್ನು ಹುಟ್ಟಿಸುವ, ಅನರ್ಥಕ್ಕೆ ಕಾರಣವಾದ ಈ ಮಾಯಾಮರವೆಂಬ (ಮಾಯಾಮತವೆಂಬ ಅದ್ವೈತವಾದ) ಕಟ್ಟಿಗೆಯನ್ನು ಮುದದಿಂದ–ಸಂತೋಷದಿಂದ ಸುಟ್ಟು ಹಾಕಬೇಕೆಂದರು. ಕರ್ತೃತ್ವ–ಸ್ವಾತಂತ್ರ್ಯ–ಭೋಕ್ತೃತ್ವಾದಿ ಭ್ರಮೆಯು ಜೀವೇಶರಲ್ಲಿ ಅಭೇದ, ಜಗತ್ತು ಮಿಥ್ಯಾ, ಬ್ರಹ್ಮನಿರ್ಗುಣ ಇತ್ಯಾದಿ., ಈ ಮಾಯಾಮರದ ಕಾಷ್ಠಗಳಿದ್ದಂತೆ. ಇವು ಎಂದಿಗೂ ತಾರಕವಲ್ಲವೆಂದು ಸಕಲ ಸದಾಗಮಗಳಿಂದ ನಿರ್ಣೀತವಾದ ತತ್ತ್ವಗಳಾಗಿವೆ. ಆದ್ದರಿಂದ ಆನಂದದಿಂದ ಇವನ್ನು ಸುಟ್ಟುಹಾಕಿದಲ್ಲಿ ಮಾತ್ರ ಭಗವಂತನ ಪರಮಪ್ರಸಾದ ಲಭ್ಯವೆಂದು ಮುದದಿಂದ ಹೇಳಿರುವರು.

ಶರಣೆಂಬೊ ಸಾಮಗ್ರಿ ಹೂಡಿ ಮೋಕ್ಷ

ಪರಿಕರವಾದಂಥ ಪಾಕವ ಮಾಡಿ

ಗುರುಶರಣರು ಸವಿದಾಡಿ ನಮ್ಮ ಪುರಂ–

ದರವಿಠಲನ ಬಿಡದೆ ಕೊಂಡಾಡಿ ॥ 3 ॥

ಇಷ್ಟೆಲ್ಲ ಆದಮೇಲೆ ಆ ಭಾಂಡದಲ್ಲಿ ಸಾಮಗ್ರಿ ಹಾಕಬೇಕು. ನಂತರ ಬೆಂದು ಪಾಕ ಸಿದ್ಧವಾಗುತ್ತದೆ. ಅದರಂತೆ ಸಾಮಗ್ರಿಗಳೇ ಶರಣೆಂಬೊ ದ್ರವ್ಯಗಳೆಂದರು. ಶರಣು ಎಂದರೆ ಪ್ರಾರ್ಥನೆ, ಉಪಲಕ್ಷಣಯಾ ನವವಿಧವಾದ ಭಕ್ತಿಯ ಮಜಲುಗಳು, ಶ್ರವಣ ಮನನಾದಿ ಸಾಧನಗಳು ಎಂದಾಗುವುದು. ಇನ್ನೊಂದು ಅರ್ಥದಲ್ಲಿ, ಸರ್ವಾತ್ಮನಾ ಶ್ರೀಹರಿಯೇ ಅತ್ಯಂತಿಕ ಎಂದು ಮೊರೆ ಹೋಗುವುದಾಗಿದೆ. **'ತ್ವಮೇವ ಶರಣಂ ಮಮ'** ಎಂದು ಆತ್ಮ ಸಮರ್ಪಿಸುಕೊಳ್ಳುವುದು. **'ತ್ವ ಮೇವ ಸರ್ವಂ ಮಮ ದೇವ ದೇವ'** ಎಂದು ದಾಸಭಾವದಿಂದ ಶರಣು ಹೋದಾಗ ಮಾತ್ರ ಹೃದಯಾಂತರಂಗದಲ್ಲಿ ನೆಲೆಸಿರುವ ಬಿಂಬರೂಪಿಯ ದರುಶನವಾಗಬಲ್ಲದು. ಅದಕ್ಕೇ ದಾಸರು ಪಾಕವಮಾಡಿ ಎಂದರೆ ಮೋಕ್ಷ ಪ್ರಾಪಕವಾದ ಫಲವನ್ನು ಸಂಪಾದಿಸಿ ಭಗವಂತನಿಗೆ ಅರ್ಪಿಸಿರೆಂದರು. ಕಡೆಯಲ್ಲಿ ಹೇಳುವಾಗ 'ಗುರುಶರಣರು ಸವಿದಾಡಿ' ಎಂಬ ಮಾತನ್ನಾಡಿದರು. ಈ ಮಾತು ಪಲ್ಲವಿಯ ವ್ಯಾಖ್ಯಾನವಾಗಿದೆ. ಭಗವಂತನಿಗೆ ಶರಣರು ತಮ್ಮನ್ನೇ ಸಮರ್ಪಿಸಿಕೊಂಡಿರುತ್ತಾರೆ. ಅಂತಹವರು ಶ್ರೀ ಹರಿಯನ್ನು 'ಸವಿದಾಡಿ' ಸವಿದು–ಹಾಡಿ–ಕೊಂಡಾಡಿ–ನಲಿದಾಡಿ ಭಕ್ತಿಪರವಶರಾಗುವರು. ಇಂತಹವರು ಪುರಂದರವಿಠಲನನ್ನು ಬಿಡದೆ ನಿರಂತರವಾಗಿ, ಏನೇಯಾದರೂ–ನಿರವಧಿಕವಾದ ಪ್ರೇಮ ಪ್ರವಾಹರೂಪದ ಭಕ್ತಿಯನ್ನು ಮಾಡಿ ಕೊಂಡಾಡುವರು. ಇವರು ಅನುಭಾವಿಗಳು. ಇಂತಹ ಅನುಭವಿಗಳು ಬಂದು ಕೂಡಿ, ಅನುಭವದಡಿಗೆಯ ಮಾಡಿ ಬಿಂಬಾ ಪರೋಕ್ಷವೆಂಬ ಅಪರೋಕ್ಷ ಜ್ಞಾನವನ್ನು ಪಡೆದು ಮುಕ್ತಿಯೆಂಬ ಅಂತಿಮದ ನಿತ್ಯಸುಖದ ತಾಣವನ್ನು ಸೇರುವರೆಂಬ ಆಧ್ಯಾತ್ಮವನ್ನು ಶ್ರೀಪುರಂದರದಾಸರು ವಿಶೇಷ ರೀತಿಯಲ್ಲಿ ಮುಮುಕ್ಷುಗಳಿಗೆ ಉಪದೇಶಿಸಿ ಅನುಗ್ರಹ ಮಾಡಿರುವರು.

ಶ್ರೀ ಕೃಷ್ಣಾರ್ಪಣಮಸ್ತು